ಸಿ.ಸಿ. ಸಂಖ್ಯೆ:01/2018.
ಪಿ.ಡಬ್ಲ್ಯೂ-1 ಸಿ.ಡಬ್ಲ್ಯೂ-1

ದಿಃ 08-01-2021 ರಂದು ಪ್ರಮಾಣೀಕರಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ಅವರಿಂದಃ-

ಎಫ್.ಓ.ಸಿ. ಸಂಖ್ಯೆ:01/2016-17 ದಿಃ04-04-2016 ಕ್ಕೆ ಸಂಬಂಧಿಸಿದಂತೆ ಕಿಕ್ಕೇರಿ ಸರ್ವೇ ನಂ.35/2 ರ ಅರಣ್ಯ ಪ್ರದೇಶದಲ್ಲಿ ಹಳದಿ ಕಲರ್ ನ ಸ್ವರಾಜ್ ಮಜ್ದ ವಾಹನದಲ್ಲಿ ಬೀಟೆ ತುಂಡುಗಳು ದೊರಕಿರುತ್ತವೆ. ಸದರಿ ವಿಚಾರವಾಗಿ ದಿಃ05-04-2016 ರಂದು ಎ.ಸಿ.ಎಫ್. ಮತ್ತು ಆರ್.ಎಫ್.ಓ. ರವರೊಂದಿಗೆ ಸ್ಥಳ ಪರಿಶೀಲನೆಗಾಗಿ ಹೋಗಿರುತ್ತೇವೆ. ಸದರಿ ಸ್ಥಳ ಪರಿಶೀಲನೆ ಮಾಡಿ ನೋಡಲಾಗಿ ಸ್ಥಳದಲ್ಲಿ 02 ಮರಗಳನ್ನು ಕಡಿದ ಬುಡ ಕಂಡುಬಂದಿರುತ್ತದೆ ಹಾಗೂ ಸದರಿ ಸ್ಥಳದಲ್ಲಿ ರೆಂಬೆ ಕೊಂಬೆಗಳು ಬಿದ್ದಿರುತ್ತವೆ ನಂತರ ನಮ್ಮ ಸಿಬ್ಬಂದಿಯವರಿಗೆ ಸದರಿ ರೆಂಬೆ ಕೊಂಬೆಗಳನ್ನು ಕಛೇರಿಗೆ ತೆಗೆದುಕೊಂಡು ಹೋಗುವಂತೆ ಮೌಖಿಕವಾಗಿ ಆದೇಶಿಸಿರುತ್ತೇನೆ. ಒಂದು ಮರದಿಂದ 02 ತುಂಡುಗಳು ದೊರಕಿದ್ದು ಅವುಗಳಿಗೆ 1/ಎ ಮತ್ತು 1/ಬಿ ಎಂದು ಹಾಗೂ ಎರಡನೇ ಮರದಿಂದ ದೊರೆತ 03 ತುಂಡುಗಳಿಗೆ 2/ಸಿ, 2/ಡಿ ಮತ್ತು 2/ಇ ಎಂದು ನಮೂದಿಸಿರುತ್ತೇವೆ. ಸದರಿ ತುಂಡುಗಳ ಮೇಲೆ ಇಲಾಖಾ ಛಾಪಾವಾದ ಕೆ.ಎನ್.ಎಫ್.ಡಿ.ಜಿ.118 ಎಫ್.ಎಫ್. ಮತ್ತು ಪ್ರಕರಣ ಸಂಖ್ಯೆ: ಎಫ್.ಓ.ಸಿ. ಸಂಖ್ಯೆ:01/2016-17 ಎಂದು ಮುದ್ರಿಸಲಾಗಿರುತ್ತದೆ. ಸದರಿ ತುಂಡುಗಳನ್ನು ಅಳತೆ ಮಾಡಿ ನೋಡಲಾಗಿ 5=0.536 ಮೀಟರ್ ಇರುತ್ತದೆ. ನಂತರ ಸ್ಥಳದಲ್ಲಿ ದೊರೆತ ತುಂಡುಗಳನ್ನು ಹಾಗೂ ಮುದ್ದೆಮಾಲುಗಳನ್ನು ಕಛೇರಿಗೆ ರವಾನಿಸಿರುತ್ತೇವೆ. ಸ್ಥಳದಲ್ಲಿ ಪಂಚರಾದ ದಸ್ತಗಿರ್ ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿದಾರರು ದಿಃ05-04-2016 ರ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-13 ಎಂದು, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ-13(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಟಿ.ಎಲ್.ಎಂ., ವಕೀಲರಿಂದ.

ನಿ.ಪಿ-1 ಮತ್ತು ನಿ.ಪಿ-13 ನ್ನು ಒಂದೇ ಸ್ಥಳದಲ್ಲಿ ಮಾಡಿರುತ್ತೇವೆ. ದಿಃ04-04-2016 ರಂದು 24 ತುಂಡುಗಳನ್ನು ಅಮಾನತ್ತುಪಡಿಸಿಕೊಂಡು ಹೋದಾಗಲು ಸಹ ನಿ.ಪಿ-13 ರ ಮೂಲಕ ವಶಪಡಿಸಿಕೊಂಡ 05 ತುಂಡುಗಳು ಸ್ಥಳದಲ್ಲಿ ಇದ್ದವು. ಸದರಿ ದಿನ ಬಂದಂತಹ ನಮ್ಮ ಮೇಲಾಧಿಕಾರಿಗಳು ಯಾವುದೇ ಮಹಜರನ್ನು ಬರೆದಿರುವುದಿಲ್ಲ ಹಾಗೂ ಮಹಜರಿಗೆ ಸಹಿ ಮಾಡಿರುವುದಿಲ್ಲ. ನಿ.ಪಿ-13 ರ ಪಂಚನಾಮೆಯನ್ನು ಜರುಗಿಸುವ ಪೂರ್ವದಲ್ಲಿ ಸ್ಥಳೀಯ ಪಂಚರನ್ನು ಕರೆಸಲು ಪ್ರಯತ್ನಿಸಿರುತ್ತೇವೆ ಆದರೆ ಯಾರೂ ಸಹಕರಿಸಿರುವುದಿಲ್ಲ. ಸದರಿ ವಿಚಾರವನ್ನು ನಿ.ಪಿ-13 ರಲ್ಲಿ ನಮೂದಿಸಿರುವುದಿಲ್ಲ. ನಿ.ಪಿ-13 ರ ಮೂಲಕ ವಶಪಡಿಸಿಕೊಂಡ ತುಂಡುಗಳನ್ನು ಟ್ರ್ಯಾಕ್ಟರ್ ಮೂಲಕ ಕಛೇರಿಗೆ ಸಾಗಿಸಿರುತ್ತೇವೆ. ಸದರಿ ಟ್ರ್ಯಾಕ್ಟರ್ ನ ಚಾಲಕನ ಸಹಿಯನ್ನು ಮಹಜರಿಗೆ ಮಾಡಿಸಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಯಾವುದೇ ತುಂಡುಗಳನ್ನು ಸ್ಥಳದಿಂದ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

**ಓ ಹೇ ಕೇ ಸ ಇದೆ**

1 ನೇ **ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ತೀರ್ಥಹಳ್ಳಿ.**